# ನುಡಿ ಜ್ಯೋತಿರ್ಲಿಂಗ

ಭಾಷೆಯ ಮೂಲಕ ಆತ್ಮೋನ್ನತಿ ಸಾಧ್ಯವೆ? ಈ ಪ್ರಶ್ನೆಗೆ, ಅಕ್ಕಮಹಾದೇವಿ ಅವರ ವಚನವೊಂದರ ಸಾಲುಗಳು ಉತ್ತರದಂತಿವೆ: 'ಸತ್ಯ ಸದ್ಭಕ್ತರ ಸಂಭಾಷಣೆ ನುಡಿಗಡಣವೆಂಬುದು / ನಿಚ್ಚಲೊಂದು ಉಪದೇಶ ಮಂತ್ರವ ಕಲಿತಂತೆ.' ಸಜ್ಜನರ ಸಂಗ ಹೆಜ್ಜೇನು ಸವಿದಂತೆ ಎನ್ನುವ ಮಾತಿನಂತೆ, ಒಳ್ಳೆಯ ಭಕ್ತರೊಂದಿಗಿನ ಸಂಭಾಷಣೆ ಉಪದೇಶ ಮಂತ್ರದ ಕಲಿಕೆ ಎನ್ನುತ್ತಾಳೆ ಅಕ್ಕ. ಮಾತು ಅಮೃತವಾಗುವುದು ಹೀಗೆ.

ಮಾತಿನ ಮಹತಿ ಮತ್ತು ಕನ್ನಡದ ಶಕ್ತಿಯನ್ನು ಶರಣರಂತೆ ಕಂಡರಸಿದ ಉದಾಹರಣೆಗಳು ಯಾವ ಭಾಷೆಯಲ್ಲೂ ವಿರಳವೇ. ಭಾಷೆಗೆ ತೊಡರಿಕೊಂಡ ಅನಗತ್ಯ ಸಿಕ್ಕುಗಳನ್ನೆಲ್ಲ ಸವರಿ, ನುಡಿಯನ್ನು ನವನೀತಗೊಳಿಸಿದ ಸಿದ್ಧಿ ಅವರದು. ಆಡು ನುಡಿಯನ್ನು 'ಸೂಳ್ನುಡಿ'ಯಾಗಿಸಿದ– ತತ್ವಜ್ಞಾನದ ಮಾತನ್ನಾಗಿಸಿದ, ತಿರುಳುಳ್ಳ ಮಾತನ್ನಾಗಿಸಿದ– ಹಿರಿಮೆಯೂ ಅವರಿಗೆ ಸಲ್ಲಬೇಕು. ನಡೆ ಮತ್ತು ನುಡಿಯ ನಡುವಣ ಅಂತರವನ್ನು ಶರಣರು ಅಳಿಸುತ್ತಾ ಹೋದಂತೆ, ಬದುಕು ಮತ್ತು ಭಾಷೆಯ ನಡುವಣ ಗೆರೆಯೂ ತೆಳುವಾಗುತ್ತಾ ಹೋಯಿತು. ಮಾತಿನ ಮಾಂತ್ರಿಕ ಶಕ್ತಿಯ ಬಗ್ಗೆ ಜಗತ್ತು ಅಚ್ಚರಿಪಡುವುದಿದೆ. ಆದರೆ, ಮಾಂತ್ರಿಕ ಶಕ್ತಿಯ ಮಾತು ಬಹುತೇಕ ಸಂದರ್ಭಗಳಲ್ಲಿ ಕಸರತ್ತಿನ ರೂಪವಾಗಿರುತ್ತದೆ ಹಾಗೂ ಅದು ಜನಸಾಮಾನ್ಯರಿಂದ ಅಂತರ ಸಾಧಿಸಿಕೊಂಡಿರುತ್ತದೆ. ಅಂಥ ಮಾತಿಗೆ ಕೆಡುಕಿನ ಸಾಧ್ಯತೆಯೂ ಇರುತ್ತದೆ. ಈ ಅಂತರ–ಮಿತಿಯನ್ನು ನೀಗಿಕೊಳ್ಳುವ ಉದ್ದೇಶದಿಂದ, ವಚನಕಾರರು ಮಾತಿಗೆ ಮಂತ್ರ ಶಕ್ತಿ ಇರುವುದಕ್ಕಿಂತಲೂ ಅಮೃತತ್ವ ಮುಖ್ಯವೆಂದು ಬಗೆದರು. 'ವಚನ' ಎನ್ನುವುದು ಮಾತೂ ಹೌದು, ಪ್ರಮಾಣವೂ ಹೌದು.

ವಚನಕಾರರು ಬಳಸಿದ್ದು ಕೊರಳಿನ ಕನ್ನಡವಲ್ಲ; ಕರುಳಿನ ಕನ್ನಡ. ನಾಡಿನ ಜನಸಾಮಾನ್ಯರ ಆಡುನುಡಿಯನ್ನವರು ಕಾವ್ಯದ ಭಾಷೆಗೆ ಒಗ್ಗಿಸಿಕೊಂಡರು. ಶ್ರಮಿಕರ ಭಾಷೆಯನ್ನು ಅನುಭವಮಂಟಪದ ಮೊಗಸಾಲೆಗೆ ತಂದರು. ವಯ್ಯಾಕರಣಿಗಳು ಸುವರ್ಣ ಚೌಕಟ್ಟಿನಲ್ಲಿರಿಸಿದ್ದ ಕನ್ನಡವನ್ನು, ಅಲ್ಲಿಂದ ಹೊರತಂದು ಅಮೃತದ ಚೌಕಟ್ಟಿನಲ್ಲಿರಿಸಿದ ಅಗ್ಗಳಿಕೆ ವಚನಕಾರರಿಗೆ ಸಲ್ಲಬೇಕು. ಈ ಪಲ್ಲಟದಿಂದಾಗಿ, ಮಾತು ಕಾವ್ಯದ ರೂಪ ತಳೆಯಿತು; ಕಾವ್ಯವೇ ಮಾತಾಯಿತು.

ಬಸವಣ್ಣನವರ ವಚನ ಗಮನಿಸಿ: 'ನುಡಿದರೆ ಮುತ್ತಿನ ಹಾರದಂತಿರಬೇಕು/ ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು/ ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು/ ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು/ ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ?.' ಮುತ್ತಿನಹಾರದ, ಮಾಣಿಕ್ಯದ ದೀಪ್ತಿಯ, ಸ್ಫಟಿಕದ ಶಲಾಕೆಯ ರೂಪದಲ್ಲಿ ಬಳಕೆಯಾಗುವ ಮಾತು, ಆತ್ಯಂತಿಕ ನೆಲೆಯಲ್ಲಿ ಲಿಂಗಸಂವೇದಿಯಾಗುತ್ತದೆ. ನುಡಿದರೆ ಲಿಂಗವೇ ಅಹುದೆನಬೇಕು ಎನ್ನುವುದು ನಿರೀಕ್ಷೆಯಷ್ಟೇ ಅಲ್ಲ – ಅದು, ಮಾತು ಲಿಂಗವಾಗಬೇಕೆನ್ನುವ ಅಪೇಕ್ಷೆಯೂ ಹೌದು. ಮುಂದುವರಿದಂತೆ ಅಲ್ಲಮ ಪ್ರಭು 'ಮಾತೆಂಬುದು ಜ್ಯೋತಿರ್ಲಿಂಗ' ಎನ್ನುತ್ತಾರೆ.

ಮಾತು ಮತ್ತು ದೈವಕ್ಕೆ ಸಂಬಂಧಿಸಿದ ಅಭೇದದ ಕಲ್ಪನೆ, ಜನಸಾಮಾನ್ಯರು ತಮ್ಮ ಬಳಕೆಯ ಮಾತಿನ ಮೂಲಕ ಆತ್ಮೋನ್ನತಿ ಸಾಧಿಸಬಹುದೆನ್ನುವುದಕ್ಕೆ ನಿದರ್ಶನವೂ ಹೌದು. ಇಲ್ಲಿನ ಮಾತು, ಕನ್ನಡವಲ್ಲದೆ ಬೇರೆಯಾವುದೂ ಅಲ್ಲ. 'ಕನ್ನಡವೆ ದೈವಮ್ಮೆ ಕನ್ನಡ ಶಬ್ದಮೆನಗೋಂಕಾರ', 'ಕನ್ನಡದ ನುಡಿಯೆ ಗಾಯತ್ರಿಯದ್ಭುತ ಮಂತ್ರ' ಎನ್ನುತ್ತಾರೆ ಸಾಲಿ ರಾಮಚಂದ್ರರಾಯರು. ಕನ್ನಡವನ್ನು ದೈವ, ಓಂಕಾರ, ಗಾಯತ್ರಿಯೆನ್ನುವ ಈ ಕನ್ನಡಪದ, ಬಸವಣ್ಣ ಹೇಳಿದ 'ನುಡಿದರೆ ಲಿಂಗ ಅಹುದಹುದೆನಬೇಕು' ಎನ್ನುವುದರ ಬೇರೊಂದು ರೂಪ. ಈ ಪರಂಪರೆಯನ್ನು ಮುಂದುವರೆಸುವ ಕುವೆಂಪು, ಕನ್ನಡವನ್ನು ಡಿಂಡಿಮವನ್ನಾಗಿಯೂ ಕರ್ನಾಟಕವನ್ನು ಹೃದಯಶಿವನನ್ನಾಗಿಯೂ ಕಾಣುತ್ತಾರೆ.

ಶರಣರಿಗೆ ಜ್ಯೋತಿರ್ಲಿಂಗವಾದ ಕನ್ನಡ, ದಾಸರಿಗೆ ಕಲ್ಲುಸಕ್ಕರೆಯಾಗಿ ಪರಿಣಮಿಸಿತು. ಭಕ್ತಿಯ ದಾರಿಯಲ್ಲಿ ನಡೆಯುವುದಕ್ಕೂ, ಲೋಕದ ಡೊಂಕು ತಿದ್ದುವ ಕಾಯಕಕ್ಕೂ ಕನ್ನಡನುಡಿ ದೀವಿಗೆಯಾಗಿ ಅರಿವಾಗಿ ಪರುಷಶಿಲೆಯಾಗಿ ಒದಗಿಬಂತು. ತಿರಿದುಣ್ಣುವುದಕ್ಕೂ ಅರಿವಿನ ಬಂಡು ಹಂಚಲಿಕ್ಕೂ ಕನ್ನಡವೇ ದ್ರವ್ಯವಾಯಿತು. ಪುರಂದರದಾಸ, ಕನಕದಾಸರ ಕೀರ್ತನೆಗಳು ಕನ್ನಡದ ದೇಹವನ್ನು ಮತ್ತಷ್ಟು ಸಾಪುಗೊಳಿಸುತ್ತಲೇ, ನುಡಿಹೊಳಪಿನ ಅಪರಂಜಿತನವನ್ನು ಎತ್ತರಕ್ಕೊಯ್ದವು.

ಮಾತೆನ್ನುವುದು ಭಾಷೆಯ ರೂಪದಲ್ಲಿ ಅನುಭವದ ಅಭಿವ್ಯಕ್ತಿಗೆ ಒದಗಿಬರುವುದು ಸಹಜ. ಅದೇ ಭಾಷೆ ಅನುಭಾವಕ್ಕೆ ಒಗ್ಗುವ ಸಂದರ್ಭದಲ್ಲಿ ಗಾಂಭೀರ್ಯವನ್ನು ಮೈಗೂಡಿಸಿಕೊಳ್ಳುತ್ತದೆ, ಜನಸಾಮಾನ್ಯರಿಗೆ ನಿಲುಕದಂತೆ ಕ್ಲಿಷ್ಟವಾಗುತ್ತದೆ. ಇದಕ್ಕೆ ಅಪವಾದ ಎನ್ನುವಂತೆ ಶರಣರು, ದಾಸರು ಏಕರೂಪದ ಕನ್ನಡವನ್ನು ಅನುಭವದ ಅಭಿವ್ಯಕ್ತಿಗೂ, ಅನುಭಾವದ ಅನುಸಂಧಾನಕ್ಕೂ ಬಳಸಿಕೊಂಡರು. ಕನ್ನಡ ಕ್ಲಿಷ್ಟವಾಗದೆ, ಜನಸಾಮಾನ್ಯರ ನುಡಿಗಟ್ಟಿನಲ್ಲೇ ಹೊಸ ಬಿತ್ತರವನ್ನು ಪಡೆಯಿತು. ಈ ಮೂಲಕ, ತಾನಾಡುವ ಭಾಷೆಯ ಮೂಲಕವೇ ಆತ್ಮೋನ್ನತಿಯೂ ಸಾಧ್ಯ ಎನ್ನುವ ಆತ್ಮವಿಶ್ವಾಸವನ್ನು ಜನಸಾಮಾನ್ಯರಿಗೆ ದೊರಕಿಸಿಕೊಟ್ಟಿತು. ಕನ್ನಡ ಈ ಶಕ್ತಿಯ ಕುರಿತೇ ಕವಿ ಗೋಪಾಲಕೃಷ್ಣ ಅಡಿಗರು ಹೇಳಿದ್ದು: 'ಪಂಪ ಕುಮಾರವ್ಯಾಸರ ದಾಸರ/ ಶರಣರ ಜ್ಯೋತಿರ್ಲಿಂಗ;/ ತಿಮ್ಮನ, ಬೋರನ, ಈರಗಮಾರರ/ ಹೃದಯದ ಸಹಜ ತರಂಗ.'

ಅಧ್ಯಾತ್ಮ–ಅನುಭಾವದ ಕುರಿತ ನಮ್ಮ ಮಾತು–ಚರ್ಚೆಗಳು ಧ್ಯಾನ–ಜ್ಞಾನವನ್ನೊಳಗೊಂಡ ಜೀವನವಿಧಾನದ ಸುತ್ತ ಗಿರಕಿ ಹೊಡೆಯುತ್ತವೆ. ಆತ್ಮದೊಂದಿಗಿನ ಅನುಸಂಧಾನಕ್ಕಾಗಿ ತಿಳಿಯದ ಭಾಷೆಗಳ ಮೊರೆಹೋಗುತ್ತೇವೆ. ಆ ಅನುಸಂಧಾನ ಜನಸಾಮಾನ್ಯರ ಭಾಷಿಕ ಚೌಕಟ್ಟಿನೊಳಗೂ ಘಟಿಸಬಲ್ಲ ಸಾಧ್ಯತೆ ಎನ್ನುವುದನ್ನು ಕನ್ನಡ ಮತ್ತೆ ಮತ್ತೆ ಸಾಬೀತುಪಡಿಸಿದೆ. 'ಕನ್ನಡಿಗರಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ' ಎನ್ನುವುದು ಬಿ.ಎಂ. ಶ್ರೀಕಂಠಯ್ಯನವರ ಮಾತು. ಈ ಮಾತು ಆತ್ಮೋನ್ನತಿಗೆ ಸಂಬಂಧಿಸಿದಂತೆಯೂ ದಿಟವಾದುದು.

ಅನುದಿನ ಬಳಕೆಯಾಗುವ ಭಾಷೆ ಅಂತರಗಂಗೆಯಂತಹುದು. ಅದು ನಮ್ಮೊಳಗಿನ ತೇವವನ್ನು ಕಾಯುತ್ತದೆ. ಜೀವನಪ್ರೀತಿಯನ್ನು ಹೆಚ್ಚಿಸುತ್ತದೆ. ಮನಸ್ಸುಗಳನ್ನು ಬೆಸೆಯುತ್ತದೆ. ನುಡಿಸಂಬಂಜದ ಕಾರಣದಿಂದಲೇ ಮಾತಿಗೆ ಜೀವಶಕ್ತಿಧಾರಣೆಯು ಸಾಧ್ಯವಾಗುತ್ತದೆ. ಭಾಷೆಯನ್ನು ಗೌರವದಿಂದ ನಡೆಸಿಕೊಳ್ಳುವುದು ಹಾಗೂ ಒಲಿಸಿಕೊಳ್ಳುವುದು ನಮ್ಮ ಆತ್ಮವನ್ನು ತಿಳಿಯಾಗಿ ಇರಿಸಿಕೊಳ್ಳುವ ಮಾರ್ಗವೂ ಹೌದು.

■ **ಚಂಪಕಮಾಲಾ**

## ಮಾತೇ ಮುತ್ತು

- ಸುಖದಲ್ಲೂ ಭಯ, ಅಪಾಯ ಇದೆ. ಕಷ್ಟದಲ್ಲೂ ಹಿತ, ಭರವಸೆ ಇದೆ.
  –ಫ್ರಾನ್ಸಿಸ್ ಬೇಕನ್

- ಮಕ್ಕಳನ್ನು ಚೆನ್ನಾಗಿ ಬೆಳೆಸುವುದು ಎಂದರೆ ಟೇಬಲ್ ಕ್ಲಾತ್ ಮೇಲೆ ಸಾಸ್ ಚೆಲ್ಲದಂತೆ ಮಾಡುವುದು ಎಂದಲ್ಲ. ಇತರರು ಹಾಗೆ ಮಾಡಿದಾಗ ಅದನ್ನು ದೊಡ್ಡದು ಮಾಡದಂತೆ ವರ್ತಿಸುವುದು ಎಂದರ್ಥ.
  –ಆ್ಯಂಟನ್ ಚೆಖಾವ್

- 'ನಮ್ಮನ್ನು ಪ್ರೀತಿಸುವವರಿದ್ದಾರೆ' ಎನ್ನುವ ನಂಬಿಕೆಯೇ ಜೀವನದ ಅತ್ಯಂತ ಹೆಚ್ಚಿನ ಸುಖ.
  –ವಿಕ್ಟರ್ ಹ್ಯೂಗೊ

- ಸುಖವನ್ನು ಸಹಿಸುವ ಶಕ್ತಿ ಒಬ್ಬನಿಗಿದ್ದರೆ ದುಃಖವನ್ನು ಸಹಿಸುವ ಶಕ್ತಿ ನೂರಾರು ಮಂದಿಗಿರುತ್ತದೆ.
  –ಥಾಮಸ್ ಕಾರ್ಲೈಲ್

- ತಮ್ಮ ಕೋಪವನ್ನು ತಾವು ನಿಯಂತ್ರಿಸದಿದ್ದರೆ ಅದು ನಮ್ಮ ಮನಸ್ಸಿನ ಜ್ಯೋತಿಯನ್ನು ನಂದಿಸಿಬಿಡುತ್ತದೆ.
  –ಇಂಗರ್ ಸಾಲ್

- ಅಹಂ ಹೇಳುತ್ತದೆ 'ಒಮ್ಮೆ ಎಲ್ಲವೂ ಸರಿಯಾದರೆ ನನಗೆ ಶಾಂತಿ ದೊರೆಯುತ್ತದೆ'. ಚೈತನ್ಯ ಹೇಳುತ್ತದೆ 'ಶಾಂತಿಯನ್ನು ಹುಡುಕಿಕೋ ಆಗ ಎಲ್ಲವೂ ಸರಿಯಾಗುತ್ತದೆ.
  –ಮೆರಿಯಾನ್ ವಿಲಿಯಮ್ ಸನ್